**<u>ಅಸಲು ದಾವಾ ಸಂಖ್ಯೆಃ 105 /2014</u> ಪಿ.ಡಬ್ಲ್ಯೂ -2**

ದಿನಾಂಕಃ 09.11.2023 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಎನ್.ಜೆ ವಕೀಲರಿಂದಃ</u>**

ನಾನು ಮಾದಾವರ ಗ್ರಾಮದಲ್ಲಿ ಹುಟ್ಟಿದಾಗಿನಿಂದಲೂ ವಾಸವಿದ್ದೇನೆ. ಪ್ರತಿವಾದಿಗಳು ಗೊತ್ತು. ಮೂಲತಃ ದಾವಾ ಆಸ್ತಿಯು ನನ್ನ ತಂದೆ ಗಂಗಪ್ಪ ಮತ್ತು ವೆಂಕಟಾಚಲಪ್ಪರವರಿಗೆ ಸೇರಿದ್ದು, ಅವರು ಕಮಲಮ್ಮರವರಿಗೆ ಮಾರಾಟ ಮಾಡಿದ್ದರು. ದಾವಾ ಆಸ್ತಿಯನ್ನು ನಾನು ಕಮಲಮ್ಮರವರಿಂದ ಖರೀದಿಸಿದ್ದೆನು. ಕಮಲಮ್ಮನ ಗಂಡನ ಹೆಸರು ವೆಂಕಟಪ್ಪ ಅಲಿಯಾಸ್ ಗಂಗಯ್ಯ ಎಂದರೆ ಸರಿಯಲ್ಲ. ಕಮಲಮ್ಮನ ಗಂಡನನ್ನು ವೆಂಕಟಪ್ಪ ಅಲಿಯಾಸ್ ಗಂಗಯ್ಯ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಮಲಮ್ಮ ಮತ್ತು ವೆಂಕಟಪ್ಪ ನಿಮ್ಮ ಊರಿನವರೇ ಆದ ಕಾರಣ ಸದರಿ ವಿಚಾರ ನಿಮಗೆ ಗೊತ್ತು ಎಂದರೆ ಸಾಕ್ಷಿಯು ಅವರು ಮಾದನಾಯಕನಹಳ್ಳಿಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಮಾದನಾಯಕನಹಳ್ಳಿ ಮತ್ತು ಮಾದಾವರ ಗ್ರಾಮದ ನಡುವೆ 2 ಕಿ.ಮೀ ಅಂತರವಿದೆ. ಕಮಲಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನಿಮಗೆ ಗೊತ್ತಿದೆ ಎಂದರೆ ಸಾಕ್ಷಿಯು ಅವರಿಗೆ 4 ಜನ ಮಕ್ಕಳು ಅವರುಗಳೆಂದರೆ ಗಣೇಶಪ್ಪ, ಶ್ರೀರಾಮಯ್ಯ, ಗೋವಿಂದಪ್ಪ , ಹನುಮಂತರಾಜು ಎಂದು ನುಡಿಯುತ್ತಾರೆ. ಗಣೇಶಪ್ಪ ಈಗ ಮೃತಪಟ್ಟಿರುತ್ತಾರೆ. ಅವರ ಹೆಂಡತಿ 1 ನೇ ಪ್ರತಿವಾದಿ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ಶ್ರೀರಾಮಯ್ಯ, ಗೋವಿಂದಪ್ಪ , ಹನುಮಂತರಾಜು ಆಗಿರುತ್ತಾರೆ. 1 ನೇ ಪ್ರತಿವಾದಿಯ ಗಂಡ ನಮಗೆ ಆಸ್ತಿ ಮಾರಾಟ ಮಾಡಿದ 2-3 ವರ್ಷಗಳ ನಂತರ ಮೃತಪಟ್ಟಿರುತ್ತಾರೆ, ದಿನಾಂಕ ನನಗೆ ನೆನಪಿಲ್ಲ.

ನನಗೆ ಕಮಲಮ್ಮ ಮತ್ತು 1 ನೇ ಪ್ರತಿವಾದಿಯ ಗಂಡ ಜಿಪಿಎ ಅನ್ನು 1992 ರಲ್ಲಿ ನೀಡಿದ್ದರು. ನಿಮ್ಮ ಪ್ರಕಾರ 1995-96 ರಲ್ಲಿ 1 ನೇ ಪ್ರತಿವಾದಿಯ ಗಂಡ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯತ್ತಾರೆ. ನನಗೆ ಬರೆದುಕೊಟ್ಟ ಜಿಪಿಎ ನೋಂದಣಿಯಾಗಿರುವುದಿಲ್ಲ. ನಾನು ಜಿಪಿಎ ಬರೆಸಿಕೊಳ್ಳುವ ಕಾಲಕ್ಕೆ ಕಮಲಮ್ಮನ ಕುಟುಂಬದ ಸದಸ್ಯರ ಬಗ್ಗೆ ವಿಚಾರ ಮಾಡಿರುವುದಿಲ್ಲ, ನನಗೆ ಕಮಲಮ್ಮ ಮತ್ತು ಅವರ 1 ನೇ

ಮಗ 1 ನೇ ಪ್ರತಿವಾದಿಯ ಗಂಡ ಮಾತ್ರ ಜಿಪಿಎ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಈಗ ಕಮಲಮ್ಮರವರು ಜೀವಂತ ಇರುವುದಿಲ್ಲ, ಅವರು ಮೃತಪಟ್ಟು 2 ವರ್ಷಗಳಾಗಿರಬಹುದು. ಕಮಲಮ್ಮ ಮತ್ತು 1 ನೇ ಪ್ರತಿವಾದಿಯ ಗಂಡ ಅವರೇ ಬಂದು ನನ್ನನ್ನು ಸಂಪರ್ಕಿಸಿ ಜಿಪಿಎ ಬರೆದುಕೊಟ್ಟಿರುತ್ತಾರೆ. ನನಗೆ ಜಿಪಿಎ ಬರೆದುಕೊಡುವ ಮೊದಲಿನಿಂದಲೂ ಕಮಲಮ್ಮರವರ ಪರಿಚಯವಿತ್ತು ಎಂದರೆ ಸರಿ. ಹಾಗಾಗಿ ಕಮಲಮ್ಮರವರು ಕುಟುಂಬ ಸದಸ್ಯರ ಬಗ್ಗೆ ನನಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿ. ನನಗೆ ಸದರಿ ಜಿಪಿಎ ಬರೆದುಕೊಡುವ ಕಾಲಕ್ಕೆ 2 ರಿಂದ 4 ನೇ ಪ್ರತಿವಾದಿಗಳಿಗೆ 18 ವರ್ಷ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಜಿಪಿಎ ಆಗುವ ಕಾಲಕ್ಕೆ 2 ರಿಂದ 4 ನೇ ಪ್ರತಿವಾದಿಗಳನ್ನು ನಾನು ನೋಡಿ ಮತ್ತು ಅವರ ಪರಿಚಯವಿರುತ್ತದೆ ಎಂದರೆ ಸರಿ. ಜಿಪಿಎ ಅನ್ನು ನೆಲಮಂಗಲದ ವಕೀಲರು ಮಾಡಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ.

ನನಗೆ ಸರ್ವೇ ನಂ. 123/2 ರಲ್ಲಿ 27 ಗುಂಟೆ ವಿಸ್ತೀರ್ಣದ ಜಮೀನನ್ನು ಕಮಲಮ್ಮ ಮತ್ತು 1 ನೇ ಪ್ರತಿವಾದಿ ಗಂಡ ನನಗೆ ಜಿಪಿಎ ಮೂಲಕ ನೀಡಿದ್ದರು. ದಾವಾ ಷೆಡ್ಯೂಲ್ ಸ್ವತ್ತು ಸರ್ವೇ ನಂ. 123/2 ರ 27 ಗುಂಟೆ ವಿಸ್ತೀರ್ಣದ ಒಳಗೆ ಬರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಸರ್ವೇ ನಂ. 123/2 ರ 27 ಗುಂಟೆ ವಿಸ್ತೀರ್ಣದ ಒಳಗೆ ಬರುತ್ತದೆ ಎಂಬುದರ ಬಗ್ಗೆ ಅನ್ಯಕ್ರಾಂತ ಮಾಡಿಸಿರುವುದಿಲ್ಲ ಮತ್ತು ಬಡಾವಣೆ ನಕ್ಷೆಯನ್ನು ಪಡೆದುಕೊಂಡಿರುವುದಿಲ್ಲ. ಯಾವ ಆಧಾರದ ಮೇಲೆ ದಾವಾ ಅಸ್ತಿಯನ್ನು ವಾದಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಅಂದಾಜಿನ ಮೇಲೆ ಅಳತೆ ಮಾಡಿ ಆಸ್ತಿಯನ್ನು ಗುರುತಿಸಿ ಕ್ರಯ ಪತ್ರ ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂ. 123/2 ರ 27 ಗುಂಟೆ ಇವತ್ತಿಗೂ ಸಹ 1 ರಿಂದ 5 ನೇ ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 27 ಗುಂಟೆ ಜಮೀನು ಈಗಲೂ ವ್ಯವಸಾಯದ ಜಮೀನಾಗಿ ಉಳಿದಿದೆ ಎಂದರೆ ಸಾಕ್ಷಿಯು ಸೈಟುಗಳನ್ನು ಖರೀದಿಸಿರುವವರು ಕೆಲವರು ಮನೆ ಕಟ್ಟಿಕೊಂಡಿದ್ದಾರೆ, ಕೆಲವು ಖಾಲಿ ಸೈಟು ಉಳಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ 27 ಗುಂಟೆ ಜಮೀನಿನಲ್ಲಿ ಒಟ್ಟು 10-12 ಸೈಟುಗಳನ್ನು ಮಾಡಿ ಮಾರಾಟ ಮಾಡಿದ್ದೇನೆ. ನೀವು ಸೈಟುಗಳನ್ನು ಮಾಡಿರುವುದರ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ನಾನು ಬಡಾವಣೆ ನಕ್ಷೆ ಮಾಡಿಸಿರುವುದಿಲ್ಲ, ಹಾಗೆಯೇ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇ ನಂ. 123/2 ರ 27 ಗುಂಟೆ ಇವತ್ತಿಗೂ ಸಹ 1 ರಿಂದ 5 ನೇ ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ. 123/2 ರ 27 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ನನ್ನನ್ನು ಸಹ ಪಕ್ಷಗಾರರನ್ನಾಗಿ ಮಾಡಿ ವಿಭಾಗ ಕೋರಿ ಓ.ಎಸ್. 1664/2009 ರಂತೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ನೆಲಮಂಗಲದಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ. ವಾದಿಗೆ ನಾನು ಮಾರಾಟ ಮಾಡಿರುವ ನಿವೇಶನ ನಂ. 18/ಎ ಆಗಿರುತ್ತದೆ. ಸದರಿ 27 ಗುಂಟೆ ಜಮೀನಿನಲ್ಲಿ ವಾದಿಗೆ ಮಾರಾಟ ಮಾಡಿರುವ ನಿವೇಶನವು ವಾಯುವ್ಯ ದಿಕ್ಕಿನಲ್ಲಿ ಇರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ ನೆನಪಿಲ್ಲ, ಆದರೆ ಮುಕ್ಕಾಲು ಸೈಟು ಇರುತ್ತದೆ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆಃ ಸರಸ್ವತಮ್ಮರವರ ನಿವೇಶನ, ಪಶ್ಚಿಮಕ್ಕೆಃ ಗೋವಿಂದಪ್ಪ, ಗಂಗಣ್ಣರವರ ಸ್ವತ್ತು, ಉತ್ತರಕ್ಕೆ ಹನುಮಣ್ಣನ ಸ್ವತ್ತು, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಸದರಿ ಚೆಕ್ಕುಬಂದಿಯಲ್ಲಿ ಬರುವ ಸರಸ್ವತಮ್ಮರವರಿಗೆ ಮಾತ್ರ ನಾನು ನಿವೇಶನವನ್ನು ಮಾರಾಟ ಮಾಡಿದ್ದೇನೆ, ಉಳಿದವರಿಗೆ ನಾನು ನಿವೇಶನ ಮಾರಾಟ ಮಾಡಿರುವುದಿಲ್ಲ ಮತ್ತು ಅದು ಅವರವರ ಸ್ವತ್ತಾಗಿರುತ್ತದೆ. ಸರಸ್ವತಮ್ಮರವರಿಗೆ ಮಾರಾಟ ಮಾಡಿದ ಸ್ವತ್ತಿನ ಸಂಖ್ಯೆ ಮತ್ತು ವಿಸ್ತೀರ್ಣ ಮರೆತಿದ್ದೇನೆ. 2006 ರಲ್ಲಿ ನಾನು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಿದ್ದೇನೆ.

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತದೆ ಎಂದರೆ ಸರಿ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ವಾದಿಗೆ ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ, ಆದರೆ ಆಗಿನ ಸರ್ಕಾರಿ ಬೆಲೆಗೆ ಮಾರಾಟ ಮಾಡಿ ನಗದಾಗಿ ಹಣ ಪಡೆದಿರುತ್ತೇನೆ. ನಾನು ಮತ್ತು ವಾದಿ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಚೆಕ್ ಮತ್ತು ಡಿಡಿ ಮೂಲಕ ಹಣ ಪಡೆಯದ ಕಾರಣ ಕ್ರಯ ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ. 123/2 ರಲ್ಲಿ ವಿಂಗಡಿಸಿರುವ ನಿವೇಶನವನ್ನು ವಾದಿಗೆ ಮಾರಾಟ ಮಾಡುತ್ತಿರುವುದಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಮೂದಿಸದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ನಿವೇಶನಗಳನ್ನು ವಿಂಗಡಣೆ ಮಾಡದಿದ್ದರೂ ಸಹ ನಿವೇಶನ ಸಂಖ್ಯೆಗಳನ್ನು ಸೃಷ್ಟಿಸಿ ಸುಳ್ಳು ಕ್ರಯ ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದ ಷೆಡ್ಯೂಲ್ ನಲ್ಲಿ ನಮೂದಿಸಿರುವ ಖಾತಾ ನಂ. 91 ನನ್ನ ಹೆಸರಿನಲ್ಲಿರಲಿಲ್ಲ, ಕಮಲಮ್ಮರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಕಮಲಮ್ಮರವರ ಹೆಸರಿನಲ್ಲಿ ಖಾತೆ ಇತ್ತು ಎಂದು ತೋರಿಸಲು ದಾಖಲೆಯನ್ನು ವಾದಿಗೆ

ನೀಡಿರುವುದಿಲ್ಲ. ನಾನು ಮತ್ತು ವಾದಿಗಳು ಖಾತೆ ನಂ. ಮತ್ತು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. _

ಮರುವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇದೆ.**

ಪ್ರಧಾನ **ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ನೆಲಮಂಗಲ.**